S/-/
15/7/19

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **544+545**
ಸದಸ್ಯರ ಹೆಸರು : ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಉತ್ತರಿಸಬೇಕಾದ ದಿನಾಂಕ : 18.07.2019
ಉತ್ತರಿಸುವ ಸಚಿವರು : ಮುಖ್ಯಮಂತ್ರಿ

*****

	ಪ್ರಶ್ನೆ	ಉತ್ತರ
ಅ)	ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್ ಇಡಿಎಲ್) ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 48 ಗುತ್ತಿಗೆ ನೌಕರರ ಪೈಕಿ ಎಷ್ಟು ಜನರನ್ನು ಖಾಯಂ ಪ್ರಕ್ರಿಯೆಯಿಂದ ಕೈಬಿಡಲಾಯಿತು; ಕೈಬಿಡಲು ಕಾರಣಗಳೇನು; ವಿವರವಾಗಿ ಹೆಸರು ಹುದ್ದೆಯ ಪದನಾಮ, ವಿದ್ಯಾರ್ಹತೆ ಹಾಗೂ ಇವರು ಮಾಸಿಕ ಪಡೆಯುತ್ತಿದ್ದ ವೇತನ ಸಹಿತ ಮಾಹಿತಿ ನೀಡುವುದು;	ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಇಡಿಎಲ್) ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ 33 ಜನರನ್ನು (ದಿ:28.07.2006 ರಂದು 31 ನೌಕರರು ಹಾಗೂ ದಿ:04.08.2006 ರಂದು 2 ನೌಕರರು) ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಚ್ಛೇದ 3.8 ರಡಿಯಲ್ಲಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಆದರೆ, ಉಳಿದ 15 ಜನರ ಪೈಕಿ 3 ಜನರು ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳು ಅನುಚ್ಛೇದ 3.8 ರಡಿಯಲ್ಲಿ ನಿಗದಿಪಡಿಸಿದ್ದ ಕನಿಷ್ಠ ಸೇವಾ ಅವಧಿಯನ್ನು ಪೂರೈಸಿರುವುದಿಲ್ಲ ಮತ್ತು ಉಳಿದ 12 ಜನರು ಮೆ॥ ಬಿ.ಎಸ್. ಕನ್ಸಲ್ಟನ್ಸಿ ಸರ್ವಿಸಸ್ ಸಂಸ್ಥೆ ಇವರಿಂದ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಇವರನ್ನು ಖಾಯಂಗೊಳಿಸುವ ಪ್ರಶ್ನೆಯ ಉದ್ಭವಿಸುವುದಿಲ್ಲ. ಸದರಿ 15 ಜನರು ಖಾಯಂ ಪ್ರಕ್ರಿಯೆಗೆ ಅರ್ಹರಾಗಿರದೇ ಇರುವುದರಿಂದ ಇವರನ್ನು ಇತರ 33 ಜನರೊಂದಿಗೆ ಖಾಯಂ ಗೊಳಿಸಲಾಗಿರುವುದಿಲ್ಲ. ಸದರಿ ನೌಕರರ ಹೆಸರು ಹುದ್ದೆಯ ಪದನಾಮ, ವಿದ್ಯಾರ್ಹತೆ ಹಾಗೂ ಇವರು ಮಾಸಿಕ ಪಡೆಯುತ್ತಿದ್ದ ವೇತನ ವಿವರ **ಅನುಬಂಧದಲ್ಲಿ** ನೀಡಲಾಗಿದೆ.
ಆ)	ಖಾಯಂ ಪ್ರಕ್ರಿಯೆಯಿಂದ ಕೈಬಿಟ್ಟ ನೌಕರರನ್ನು ಈ ಮೊದಲು ಖಾಯಂ ಮಾಡಿದ ನೌಕರರಂತೆ ಸರಿಸಮಾನಾಗಿ (On Par with) ಖಾಯಂ ಮಾಡುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ಮಾಡಿರುವುದು ನಿಜವೇ;	ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ರಿಟ್ ಅರ್ಜಿ ಸಂಖ್ಯೆ : 15469-15483/2008 (SPRO)ರ ತೀರ್ಪು ದಿ: 16.07.2014 ರಲ್ಲಿ ನೀಡಿರುವ ತೀರ್ಪಿನ ಉದ್ಧೃತ ಭಾಗ ಕೆಳಕಂಡಂತಿರುತ್ತದೆ. "The respondent no. 2 is directed to consider the cases of the petitioners and pass appropriate orders for regularization of services of the petitioners on par with the respondents 4 to 48, on the representations to respondent No. 2 along with relevant documents to be made by the petitioners within two weeks from today. The time for compliance by Respondent No..2 is four weeks from the date of receipt of such representation. With these observations, the writ petitions stand disposed of".
ಇ)	ಇದರ ಸಂಬಂಧ ಕಾನೂನು ಇಲಾಖೆಯು ಇವರನ್ನು ಅವರಿಗೆ ಸರಿಸಮಾನಾಗಿ ವಿಲೀನಗೊಳಿಸುವಂತೆ ಅಭಿಪ್ರಾಯ ನೀಡಿದ್ದು, ಈ ಅಭಿಪ್ರಾಯಕ್ಕೆ ಮಾನ್ಯ ಇಂಧನ ಸಚಿವರು ಅನುಮೋದನೆ ನೀಡಿದರೂ ಕೂಡಾ ಅಧಿಕಾರಿಗಳು ಇವರನ್ನು ಖಾಯಂ ಮಾಡದಿರಲು ಕಾರಣಗಳೇನು;	ಮಾನ್ಯ ಉಚ್ಚನ್ಯಾಯಾಲಯದ ತೀರ್ಪು ದಿ. 16.07.2014 ರನುಸಾರ ರಿಟ್ ಅರ್ಜಿದಾರರು ಕ್ರೆಡಲ್ ಸಂಸ್ಥೆಗೆ ತಮ್ಮನ್ನು ಸೇವಾ ಸಕ್ರಮಗೊಳಿಸುವ ಬಗ್ಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಸಂಸ್ಥೆಯಿಂದ ದಿನಾಂಕ 19.08.2014 ಮತ್ತು 04.12.2014 ರಂದು ಹಿಂಬರಹ ನೀಡಲಾಗಿರುತ್ತದೆ.

ಈ)	ಮಾನ್ಯ ಉಚ್ಚ ನ್ಯಾಯಾಲಯದ ಆದೇಶವು ಸಂವಿಧಾನದ ವಿಧಿ ಅನ್ವಯ ಇಲಾಖೆಗೆ ಬೈಡಿಂಗ್ ಅಲ್ಲವೇ ಹಾಗಾದರೆ ಈ ಆದೇಶವನ್ನು ಜಾರಿಗೊಳಿಸದಿರಲು ಅಥವಾ ಮೇಲ್ಮನವಿಯನ್ನು ಸಲ್ಲಿಸದಿರಲು ಕಾರಣಗಳೇನು; ಉ) ಹಾಗಾದರೆ ಕಳೆದ 12 ವರ್ಷಗಳಿಂದ ಹೋರಾಟ ನಡೆಸುತ್ತಿರುವ ನೊಂದ ಈ ಅಭ್ಯರ್ಥಿಗಳನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕೆಆರ್ ಇಡಿಎಲ್ ಸಂಸ್ಥೆಯಲ್ಲಿ ಖಾಯಂ ಆಗಿ ವಿಲೀನಗೊಳಿಸಿ–ಆದೇಶ ಹೊರಡಿಸಿ ನ್ಯಾಯ ಒದಗಿಸಲಾಗುವುದು?	ಸೇವಾ ಸಕ್ರಮಾತಿಗೊಳಿಸುವಂತೆ ಕೋರಿ ರಿಟ್ ಅರ್ಜಿ ಸಲ್ಲಿಸಿದ 15 ಜನರ ಪೈಕಿ 3 ಜನರು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದು, ಸಕ್ರಮಗೊಳಿಸಲು ಅಂದು ಚಾಲ್ತಿಯಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಒಂದು ವರ್ಷದ ಕನಿಷ್ಠ ಸೇವಾ ಅರ್ಹತೆಯನ್ನು ಪಡೆಯದೆ ಇದ್ದುದರಿಂದ, ಸದರಿ 03 ಜನರನ್ನು 33 ಮಂದಿ ನೌಕರರೊಂದಿಗೆ ಸಕ್ರಮಗೊಳಿಸಿರುವುದಿಲ್ಲ. 12 ಜನರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವುದರಿಂದ, ಸೇವಾ ಸಕ್ರಮಾತಿಗೆ ಅರ್ಹರಿರುವುದಿಲ್ಲ. ಈ 15 ಜನರನ್ನು 2009ನೇ ಸಾಲಿನಲ್ಲಿಯೇ ತಾತ್ಕಾಲಿಕ ಸೇವೆಯಿಂದ ಬಿಡುಗಡೆಗೊಳಿಸಲಾಗಿದ್ದು, ಇವರು ಸೇವೆಯಲ್ಲಿ ಮುಂದುವರೆದಿರುವುದಿಲ್ಲ. **ಸರ್ವೋಚ್ಚ ನ್ಯಾಯಾಲಯದ (2006) 4 SCC 1 ಉಮಾದೇವಿ v/s ಕರ್ನಾಟಕ ರಾಜ್ಯ ಮತ್ತು ಇತರರ ಪ್ರಕರಣದಲ್ಲಿ ಗುತ್ತಿಗೆ ಆದಾರದ ಮೇಲೆ ಸೇವೆ ಸಲ್ಲಿಸುವ ಜನರನ್ನು ಸಕ್ರಮಗೊಳಿಸುವ ಬಗ್ಗೆ ನೀಡಿರುವ ತೀರ್ಪನ್ನು ಹಲವು ಬಾರಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವುದರಿಂದ ಅರ್ಜಿದಾರರ ಮನವಿಗಳನ್ನು ನಿಯಮಾನುಸಾರ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿ ಸದರಿಯವರ ಮನವಿಗಳಿಗೆ ಹಿಂಬರಹಗಳನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಸದರಿ 15 ಜನರ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿ ಗುತ್ತಿಗೆ ಆಧಾರದ ಸಿಬ್ಬಂದಿಗಳ ಸೇವೆ ವಿಲೀನಗೋಳಿಸಿ ಖಾಯಂಗೊಳಿಸಲು ಬರುವುದಿಲ್ಲ.**

ಸಂಖ್ಯೆ: ಎನರ್ಜಿ 65 ಇಬಿಎಸ್ 2019

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

12

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರುಗಳ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 544+545 ಕ್ಕೆ ಅನುಬಂಧ

3 ಗುತ್ತಿಗೆ ನೌಕರರ ಹೆಸರು, ಹುದ್ದೆಯ ಪದನಾಮ, ವಿದ್ಯಾರ್ಹತೆ, 3 ಗುತ್ತಿಗೆ ನೌಕರರ ಹೆಸರು, ಹುದ್ದೆಯ ಪದನಾಮ, ವಿದ್ಯಾರ್ಹತೆ, ಗುತ್ತಿಗೆ ಆಧಾರದ ಮೇಲೆ ಕಾರ್ಯಾರಂಭ ಗೂಳಿಸಿದ ದಿನಾಂಕ ಹಾಗೂ ಮಾಸಿಕ ವೇತನ ವಿವರ:

ಕ್ರ. ಸಂ	ಹೆಸರು ಮತ್ತು ಪದನಾಮ	ವಿದ್ಯಾರ್ಹತೆ	ಗುತ್ತಿಗೆ ಆಧಾರದ ಮೇಲೆ ಕಾರ್ಯಾರಂಭಗೂಳಿಸದ ದಿನಾಂಕ	ಸಂಸ್ಥೆಯ ಸೇವೆಯಿಂದ ಬಿಡುಗಡೆಗೊಂಡ ದಿನಾಂಕ	ಒಟ್ಟು ಅಂದಿನ ವೇತನ (ರೂ.ಗಳಲ್ಲಿ)	ನಿವ್ವಳ ಅಂದಿನ ವೇತನ (ರೂ.ಗಳಲ್ಲಿ)
1	ಸುಧೀರ್‌ಕುಮಾರ್ ಬಿ.ಎನ್. ಸಹಾಯಕರು ಆದಿತ್ಯ ಸೋಲಾರ್ ಶಾಪ್	B.Com	12.09.2005	31.01.2009	5075	4484
2	ಬಸವರಾಜು ಬಿ. ಕೆ. ಸೋಗಿ ವಿಂಡ್ ಡೆಮೋ ಪ್ರಾಜೆಕ್ಟ್	ITI	31.01.2006	31.01.2009	4425	3945
3	ಕಲ್ಪನಾ ವಿ. ಕೆ. ಸಹಾಯಕರು ಪ್ರಚಾರ ಕಾರ್ಯ	PUC	07.06.2006	31.01.2009	4425	3945

12 ಹೊರಗುತ್ತಿಗೆ ನೌಕರರ ಹೆಸರು, ಹುದ್ದೆಯ ಪದನಾಮ, ವಿದ್ಯಾರ್ಹತೆ, ಹೋರಗುತ್ತಿಗೆ ಆಧಾರದ ಮೇಲೆ ಕಾರ್ಯಾರಂಭ ಗೂಳಿಸಿದ ದಿನಾಂಕ ಹಾಗೂ ಮಾಸಿಕ ವೇತನ ವಿವರ:

ಕ್ರ. ಸಂ	ಹೆಸರು ಮತ್ತು ಪದನಾಮ	ವಿದ್ಯಾರ್ಹತೆ	ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯಾರಂಭಗೊಳಿಸದ ದಿನಾಂಕ	ಸಂಸ್ಥೆಯ ಸೇವೆ ಕೊನೆಗೊಂಡ ದಿನಾಂಕ	ಒಟ್ಟು ಅಂದಿನ ವೇತನ (ರೂ.ಗಳಲ್ಲಿ)	ನಿವ್ವಳ ಅಂದಿನ ವೇತನ (ರೂ.ಗಳಲ್ಲಿ)
1	ಸುರೇಖಾ ಟಿ ಎನ್ ಸಹಾಯಕ ತಾಂತ್ರಿಕ ಅಧಿಕಾರಿ	B.E	08.09.2004	31.01.2009	9485	8325
2	ವಿಜಯಲಕ್ಷ್ಮಿ ಎನ್ ಪಿ ಸಹಾಯಕ ತಾಂತ್ರಿಕ ಅಧಿಕಾರಿ	B.E	24.04.2006	31.01.2009	9485	8325
3	ಶ್ರೀನಿವಾಸ್‌ಮೂರ್ತಿ ಕೆ. ವಿ. ಕಿರಿಯ ಅಭಿಯಂತರರು	Diploma Engineering	01.05.2007	31.01.2009	5875	5110
4	ಗೋಪಾಲ್ ಪಿ. ಆರ್. ಯೋಜನಾ ಕಾರ್ಯ –ರಾಜ್ಯ ಮಟ್ಟದ ಇಂಧನವನ	M.A	23.07.2007	31.01.2009	4425	3894
5	ರಘುಪ್ರಸಾದ್ ಕೆ ವಿ ಯೋಜನಾಕಾರ್ಯ- ಸೋಲಾರ್ ವಿಭಾಗ	ITI	07.02.2007	31.01.2009	4425	3945
6	ಶ್ರೀನಿವಾಸ್. ಸಿ ದ್ವಿತಿಯ ದರ್ಜೆ ಸಹಾಯಕರು	ITI	01.07.2005	31.01.2009	4000	3520
7	ಶಿವಕುಮಾರ್ ಎಮ್. ಸಿಸ್ಟಮ್ ಅನಾಲಿಸ್ಟ್	M.Sc	17.10.2005	31.01.2009	7825	6826
8	ರೇವಣ್ಣ ಎಮ್ ಟಿ. ದ್ವಿತಿಯ ದರ್ಜೆ ಸಹಾಯಕರು	PUC	12.08.2005	31.01.2009	4000	3520
9	ಶಿವಪ್ರಸಾದ ಎನ್. ಪ್ಯೂನ್	SSLC	01.02.2005	31.01.2009	3425	3014
10	ನಾಗರಾಜು ಟಿ ಜಿ. ಪ್ಯೂನ್	SSLC	02.01.2006	31.01.2009	3425	3014
11	ಸಿದ್ದಲಿಂಗಯ್ಯ ಸಿ. ಜಿ. ಪ್ಯೂನ್	SSLC	10.03.2008	31.01.2009	3925	3505
12	ಮೋಹನ್ ರಾವ್ ಪಿ ಪ್ಯೂನ್	SSLC	10.03.2008	31.01.2009	3925	